

بسم اللهِ الرّحمٰن الرّحيم

**ನಮಾಝ್ ಬಾಜಮಾಅತ್ ಆಗಿ ನಿರ್ವಹಿಸದಿರುವುದು ಹಾಗೂ ವಿನಾಕಾರಣ ನಮಾಝ್‌ಗಳನ್ನು ಜಮಅ್ ಮಾಡುವುದು ಒಂದು ಸಾಮೂಹಿಕ ಕೆಡುಕಾಗಿ ಪರಿಣಮಿಸುವ ಮೊದಲೇ ನಾವು ಎಚ್ಚರಗೊಳ್ಳಬೇಕಾಗಿದೆ.**

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **13-02-2015** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಸಮುದಾಯದ ನ್ಯೂನತೆಗಳ ಮತ್ತು ಬಲಹೀನತೆ ಬಗ್ಗೆ ಒಂದು ಖುತ್‌ಬ ನೀಡಿದ್ದರು. ಆ ನ್ಯೂನತೆಗಳ ಕಾರಣ ಮತ್ತು ಅವುಗಳಿಂದ ರಕ್ಷಿಸಿಕೊಳ್ಳುವ ಬಗ್ಗೆ ಜಮಾಅತಿನ ಗಮನ ಸೆಳೆದಿದ್ದರು. ಅವರು ಹೇಳಿದ ಉಪದೇಶಗಳು ಇಂದು ಸಹ ಆವಶ್ಯಕವಾಗಿವೆ. ಆ ಖುತ್‌ಬದಿಂದ ಆಯ್ಕೆ ಮಾಡಿದ ಕೆಲವು ವಿಷಯಗಳನ್ನು ಇಂದು ನಾನು ನಿಮಗೆ ವಿವರಿಸುತ್ತೇನೆ. ಬಲಹೀನತೆಗಳು ಎರಡು ವಿಧಗಳಲ್ಲಿರುತ್ತವೆ. ಒಂದು ವೈಯಕ್ತಿಕ ನ್ಯೂನತೆ ಮತ್ತು ಬಲಹೀನತೆ. ಇನ್ನೊಂದು ಸಾಮುದಾಯಿಕ ಬಲಹೀನತೆ. ಇದೇ ರೀತಿ ಒಳಿತುಗಳು ಸಹ ಎರಡು ವಿಧಗಳಲ್ಲಿರುತ್ತದೆ. ಒಂದು ವೈಯಕ್ತಿಕ ಒಳಿತುಗಳು ಇನ್ನೊಂದು ಸಾಮುದಾಯಿಕ ಒಳಿತುಗಳು. ವೈಯಕ್ತಿಕ ಬಲಹೀನತೆಯೆಂದರೆ, ಕೆಲವು ವ್ಯಕ್ತಿಗಳಲ್ಲಿ ಇರುವ ಬಲಹೀನತೆಗಳು. ಸಾಮೂಹಿಕವಾಗಿ ಅವು ಎಲ್ಲರಲ್ಲೂ ಇರುವುದಿಲ್ಲ. ಹಾಗೆಯೇ ಕೆಲವು ಒಳಿತುಗಳು ವ್ಯಕ್ತಿಗಳಲ್ಲಿರುತ್ತವೆ. ಆದರೆ ಸಮಾಜದಲ್ಲಿ ಅವು ಇರುವುದಿಲ್ಲ. ಕೆಲವು ವ್ಯಕ್ತಿಗಳು ತಮ್ಮ ಜ್ಞಾನ ಮತ್ತು ಪ್ರಯತ್ನ ಮೂಲಕ ಕೆಲವು ಒಳಿತುಗಳನ್ನು ತಮ್ಮಲ್ಲಿ ಹೊಂದುತ್ತಾರೆ. ಇದೇ ರೀತಿ ವೈಯಕ್ತಿಕ ನ್ಯೂನತೆಗಳು ಮತ್ತು ಬಲಹೀನತೆಗಳು ಸಹ ಆ ವ್ಯಕ್ತಿ ವಾಸಿಸುವ ಪರಿಸ್ಥಿತಿಗೆ ಅನುಸಾರವಾಗಿರುತ್ತದೆ. ಒಳಿತು ಮತ್ತು ಕೆಡುಕುಗಳ ಬಗ್ಗೆ ನೆನಪಿಡಬೇಕಾದ ಪ್ರಧಾನ ಅಂಶವೆಂದರೆ, ಒಳಿತು, ಕೆಡುಕು, ಬಲಹೀನತೆ, ಇವೆಲ್ಲಾ ಪರಿಸ್ಥಿತಿಯ ಪ್ರಭಾವದಿಂದ ತಲೆದೋರುತ್ತದೆ. ಇದರ ಉದಾಹರಣೆ ಹೀಗಿದೆ: ಯಾವುದೇ ಬೀಜ ನೆಲವಿಲ್ಲದೆ ಮೊಳಕೆ ಒಡೆಯದು. ಒಂದು ಬೀಜದಿಂದ ಸರಿಯಾದ ಲಾಭ ಪಡೆಯಲು ನೆಲ ಅಥವಾ ನೆಲದಂತಹ ಪರಿಸರವಿರಬೇಕು. ನೆಲದ ಆಶ್ರಯವಿಲ್ಲದೆ ಬೀಜ ಮೊಳಕೆ ಬಂದರೂ ಸಹ ಅದು ಸ್ವಲ್ಪ ಕಾಲದೊಳಗೆ ಒಣಗಿ ಹೋಗುವುದು. ಇದೇ ರೀತಿ ಕೆಡುಕು ಕೆಟ್ಟ ಪರಿಸರದ ಕಾರಣದಿಂದಲೂ ಒಳಿತು ಒಳ್ಳೆಯ ಪರಿಸರದ ಕಾರಣದಿಂದಲೂ ತಲೆದೋರುತ್ತದೆ. ಒಳಿತು ಮತ್ತು ಕೆಡುಕು ಅದಕ್ಕೆ ಅನುಯೋಜ್ಯವಾದ ಪರಿಸರದಲ್ಲಿ ಬೆಳವಣಿಗೆ ಹೊಂದುತ್ತದೆ. ಆದರೆ ಪರಿಸರ ಸಹ ಎರಡು ವಿಧಗಳಲ್ಲಿ ಇರುತ್ತವೆ. ಒಂದೇ ರೀತಿಯ ಪರಿಸರ ಪ್ರತಿಯೊಬ್ಬನ ಮೇಲೂ ಒಂದೇ ರೀತಿಯ ಪ್ರಭಾವ ಬೀರಬೇಕೆಂದೇನೂ ಇಲ್ಲ.

ಒಂದು ರೀತಿಯ ಪರಿಸರ ಕೇವಲ ವ್ಯಕ್ತಿಗಳ ಮೇಲೆ ಪ್ರಭಾವ ಬೀರುವಂಥದ್ದು. ಅದು ಸಾಮುದಾಯಿಕವಾಗಿ ಎಲ್ಲರ ಮೇಲೂ ಪ್ರಭಾವ ಬೀರಲು ಶಕ್ತವಾಗಿರುವುದಿಲ್ಲ. ಇದರ ಉದಾಹರಣೆ ಕೆಲವು ವಿಶಿಷ್ಟ ಬೆಳೆಗಳು ಬೆಳೆಯುವ ಭೂಮಿಯ ಹಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಝಾಫ್ರಾನ್ ಬಗ್ಗೆ ಹೇಳಿದ್ದಾರೆ. ಅದು ಹಿಂದುಸ್ತಾನದ ಎಲ್ಲ ಕಡೆ ಬೆಳೆಯುವುದಿಲ್ಲ. ಅದು ಕಾಶ್ಮೀರದ ಪ್ರದೇಶದಲ್ಲಿ ಮಾತ್ರ ಬೆಳೆಯುತ್ತದೆ. ಕಾಶ್ಮೀರದಲ್ಲಿ ಸಹ ಒಂದು ವಿಶಿಷ್ಟ ಪ್ರದೇಶದಲ್ಲಿ ಅತ್ಯಂತ ಉನ್ನತ ಮಟ್ಟದ ಝಾಫ್ರಾನ್ ಬೆಳೆಯುತ್ತದೆ. ಇದೇ ರೀತಿ, ಪರಿಮಳ ಬೀರುವ ಬಾಸ್ಮತಿ ಅಕ್ಕಿ ಕಾಲರ್ ಎಂಬ ಪ್ರದೇಶದಲ್ಲಿ ಮಾತ್ರ ಬೆಳೆಯುತ್ತದೆ. ಪಾಕಿಸ್ತಾನದ ಬೇರೆಲ್ಲಿಯೂ ಇಂತಹ ಸುವಾಸನೆಯ ಬಾಸ್ಮತಿ ಅಕ್ಕಿ ಬೆಳೆಯುವುದಿಲ್ಲ. ಒಟ್ಟಾರೆ ಹೇಳುವುದಾದರೆ ಕೆಲವು ವಿಶಿಷ್ಟ ಬೀಜಗಳ ಬೆಳವಣಿಗೆಗೆ ವಿಶಿಷ್ಟ ಭೂಪ್ರದೇಶ ಮತ್ತು ಹವಾಮಾನದ ಸ್ಥಿತಿ ಆವಶ್ಯಕವಾಗುತ್ತದೆ. ಇದಕ್ಕೆದುರಾಗಿ ಕೆಲವು ಬೆಳೆಗಳು ಉದಾಹರಣೆಗೆ ಗೋಧಿ ಮತ್ತು ಕೆಲವು ತೋಟದ ಬೆಳೆಗಳು ದೇಶದ ಎಲ್ಲ ಪ್ರದೇಶಗಳಲ್ಲೂ ಬೆಳೆಯುತ್ತವೆ. ಉತ್ಪಾದನೆ ಹೆಚ್ಚು ಅಥವಾ ಕಡಿಮೆ ಆಗಬಹುದು. ಆದರೆ ಅವು ಎಲ್ಲ ಕಡೆಗಳಲ್ಲೂ ಬೆಳೆಯುತ್ತವೆ.

ಇದೇ ರೀತಿ ಒಳಿತುಗಳು ಮತ್ತು ಕೆಡುಕುಗಳು ಕೆಲವು ಪ್ರಭಾವಗಳ ಕಾರಣ ಸಾಮುದಾಯಿಕವಾಗುತ್ತವೆ. ಮತ್ತು ಸಮುದಾಯದ ಒಟ್ಟಾರೆ ಅಭಿವೃದ್ಧಿ ಅಥವಾ ಅಧಃಪತನಕ್ಕೆ ಅವು ಕಾರಣವಾಗುತ್ತವೆ. ವ್ಯಕ್ತಿಯ ಕೆಡುಕುಗಳಾದರೆ ಆ ವ್ಯಕ್ತಿಯ ಸ್ವಂತ ಪ್ರಯತ್ನದಿಂದ ಅವುಗಳನ್ನು ದೂರ ಸರಿಸಬಹುದು. ಮಾತ್ರವಲ್ಲ ಕೆಡುಕುಗಳು ದೂರ ಸರಿದು ವೈಯಕ್ತಿಕ ಒಳಿತುಗಳನ್ನು ಪ್ರಯತ್ನ ಪಟ್ಟು ಗಳಿಸಬಹುದಾಗಿದೆ. ಆದರೆ, ಒಂದು ಸಮಾಜದಲ್ಲಿ ಕೆಡುಕು ತಲೆದೋರಿದರೆ ಒಬ್ಬ ವ್ಯಕ್ತಿಯ ಪ್ರಯತ್ನದಿಂದ ಅದನ್ನು ದೂರ ಸರಿಸಲು ಸಾಧ್ಯವಿಲ್ಲ. ಸಾಮುದಾಯಿಕ ಕೆಡುಕು ವ್ಯಕ್ತಿಯನ್ನು ತನ್ನ ಪ್ರಭಾವಕ್ಕೆ ಗುರಿ ಪಡಿಸುತ್ತದೆ. ಒಂದು ಪ್ರದೇಶದ ವಾತಾವರಣ ಕೆಟ್ಟು ಹೋದರೆ ಅಲ್ಲಿರುವ ಎಲ್ಲರೂ ಅದರಿಂದ ಪ್ರಭಾವಿತರಾಗುತ್ತಾರೆ. ಉದಾಹರಣೆಗೆ ಒಬ್ಬ ವ್ಯಕ್ತಿ ವಿಷ ಸೇವಿಸಿದರೆ ಅವನ ಶರೀರದ ಪ್ರತಿಯೊಂದು ಅಂಗಾಂಗಗಳೂ ಅದರಿಂದ ಪ್ರಭಾವಿತವಾಗುತ್ತದೆ. ಅವನ ಕೈ, ಕಾಲು, ಮೆದುಳುಗಳ ಮೇಲೆ ಅದು ಪ್ರಭಾವ ಬೀರದಿರದು. ಅದು ಶರೀರವನ್ನು ಪೂರ್ಣವಾಗಿ ಪ್ರಭಾವಕ್ಕೊಳಪಡಿಸುವುದು. ಇದೇ ರೀತಿ ನಾವು ತಿನ್ನುವ ಮಾಂಸ, ಹಣ್ಣು ಮೊದಲಾದವುಗಳಿಂದ ನಮ್ಮ ಶರೀರದ ಪ್ರತಿಯೊಂದು ಅಂಗ ಲಾಭ ಪಡೆಯುತ್ತದೆ. ಈ ಎಲ್ಲ ಅಂಗಾಂಗಗಳು ಶರೀರದ ಭಾಗಗಳಾಗಿವೆ. ಆದುದರಿಂದ ವಿಷದ ಪ್ರಭಾವ ಶರೀರವನ್ನು ವ್ಯಾಪಿಸುವ ಹಾಗೆ ಒಳ್ಳೆಯ ಆಹಾರ ಸಹ ಇಡೀ ದೇಹವನ್ನು ತಲಪುತ್ತದೆ.

ಆದುದರಿಂದ ನಮ್ಮ ಪೈಕಿ ಪ್ರತಿಯೊಬ್ಬನೂ ತನ್ನ ಸ್ವಂತ ಬಲಹೀನತೆಗಳನ್ನು ನೋಡಿ ಅವುಗಳನ್ನು ಸರಿಪಡಿಸಲು ಪ್ರಯತ್ನಿಸುತ್ತಿರುವಂತೆಯೇ ನಮ್ಮ ಸಮುದಾಯದ ಬಲಹೀನತೆಗಳನ್ನು ಸಹ ಗುರುತಿಸಿಕೊಂಡು ಅವುಗಳನ್ನು ನಿವಾರಿಸಲು ಸಾಮೂಹಿಕವಾದ ಪ್ರಯತ್ನ ನಡೆಸಬೇಕಾಗಿದೆ. ಈ

ಪ್ರಯತ್ನದಲ್ಲಿ ಎಲ್ಲರೂ ಭಾಗಿಗಳಾಗಬೇಕಾಗಿದೆ. ಏಕೆಂದರೆ ಎಲ್ಲರೂ ಒಟ್ಟಾಗಿ ಭಾಗವಹಿಸಿ ಪ್ರಯತ್ನ ಮಾಡದೆ ಮತ್ತು ಸಾಮೂಹಿಕ ಚಿಕಿತ್ಸೆ ನಡೆಸದೆ ನಾವು ಜಯಗಳಿಸಲಾರೆವು. ನೀವು ನೈಸರ್ಗಿಕ ವಿಪತ್ತುಗಳನ್ನು ನೋಡಿರಿ. ನೆರೆ ಬಂದಾಗ ಒಬ್ಬ ರೈತ ತನ್ನ ಗದ್ದೆಗೆ ತಡೆ ಗೋಡೆ ಕಟ್ಟಿ ನೆರೆಯನ್ನು ತಡೆಯಲಾರ. ತಡೆಗೋಡೆಗಳನ್ನೂ ಅಣೆಕಟ್ಟುಗಳನ್ನೂ ಕಟ್ಟುವುದು ಸರಕಾರದ ಕೆಲಸವಾಗಿರುತ್ತದೆ. ಸರಕಾರದ ವತಿಯಿಂದ ಸಾಮೂಹಿಕ ಪ್ರಯತ್ನ ನಡೆಸಲಾಗುತ್ತಿದೆ. ಸರಕಾರವೆಂದರೆ ಜನರು ಜಮಾಯಿಸಿ ಮಾಡುವ ವ್ಯವಸ್ಥೆ. ಸರಕಾರವೇ ಅವ್ಯವಸ್ಥೆಗೆ ಪಾತ್ರವಾಗಿದ್ದರೆ ಸಮಾಜ ಅದರಿಂದ ಹಾನಿ ಅನುಭವಿಸುತ್ತದೆ. ಆದುದರಿಂದ ಸಾಮುದಾಯಿಕ ಪ್ರಜ್ಞೆ ಸಮಾಜದ ಸುಧಾರಣೆಗೆ ಆವಶ್ಯಕವಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ನಾವು ನಮ್ಮ ಸಾಮುದಾಯಿಕ ಕೆಡುಕುಗಳನ್ನು ಹೇಗೆ ನೋಡಬೇಕು ಅವುಗಳ ಬಗ್ಗೆ ಹೇಗೆ ಚಿಂತಿಸಬೇಕು ಎಂದು ವಿವರಿಸಿದ್ದಾರೆ. ಜಮಾಅತ್ ಕೆಲವು ಪಾರ್ಶಗಳಿಂದ ಅವುಗಳನ್ನು ಪತ್ತೆಹಚ್ಚಿ ಅವುಗಳಿಗೆ ಸರಿಯಾದ ಚಿಕಿತ್ಸೆ ಮಾಡಿದರೆ ಅದರಿಂದ ಲಾಭ ಸಿಗುವುದು. ಒಂದು ಜನಾಂಗಕ್ಕೆ ನೀಡಲಾದ ಉಪದೇಶಗಳನ್ನು ಅನುಸರಿಸುವುದು ಕಡ್ಡಾಯ ಕರ್ತವ್ಯವೆಂದು ಪ್ರತಿಯೊಬ್ಬನು ಭಾವಿಸುತ್ತಾನೆ. ಒಂದು ಧರ್ಮದ ನಂಬಿಕೆಗಳು ತಪ್ಪಾಗಿದ್ದರೆ ಅದರ ಪರಿಣಾಮ ಅವನ ಧಾರ್ಮಿಕ ಅನುಷ್ಠಾನದಲ್ಲೂ ಅವನ ಸಾಮುದಾಯಿಕ ಜೀವಿತದಲ್ಲೂ ಕೆಟ್ಟದಾಗಿರುತ್ತದೆ. ಆದರೆ ಮುಸ್ಲಿಮರು ಪವಿತ್ರ ಖುರ್‌ಆನ್ ಅಲ್ಲಾಹನ ವಾಣಿ ಎಂದು ನಂಬುತ್ತಾರೆ. ಅದರ ಉಪದೇಶಗಳಲ್ಲಿ ಯಾವುದೇ ನ್ಯೂನತೆ ಇಲ್ಲ ಎಂದೂ ನಂಬುತ್ತಾರೆ. ಅದರಿಂದ ಕೆಟ್ಟ ಪರಿಣಾಮ ಎಂದೂ ಆಗಲಾರದು. ಆದರೆ ಮುಸ್ಲಿಮರೆಲ್ಲರೂ ಕೆಡುಕುಗಳಿಂದ ಮುಕ್ತರಾಗಿ ಪರಿಶುದ್ಧರಾಗಿರುವರೇ? ನಾವು ಮುಸ್ಲಿಮರ ಸಾಮಾನ್ಯ ಸ್ಥಿತಿಯನ್ನು ನೋಡುವುದಾದರೆ, ಮುಸ್ಲಿಮರಲ್ಲಿ ಬಹು ಸಂಖ್ಯಾತರು ಕೆಡುಕುಗಳಲ್ಲಿರುವುದಾಗಿ ಕಂಡುಬರುತ್ತದೆ. ಇದರ ಬಗ್ಗೆ ಯೋಚಿಸಬೇಕು. ಪವಿತ್ರ ಖುರ್‌ಆನ್‌ನಲ್ಲಿ ಯಾವ ನ್ಯೂನತೆಯೂ ಇಲ್ಲ ಅದು ಪರಿಪೂರ್ಣ ಉಪದೇಶಗಳನ್ನು ಹೊಂದಿದೆ. ಹಾಗಾದರೆ ಮುಸ್ಲಿಮರ ಈ ಸ್ಥಿತಿಗೆ ಕಾರಣವೇನು? ನ್ಯೂನತೆ ಇರುವುದು ಎಲ್ಲಿ? ಇದರ ಉತ್ತರವೇನೆಂದರೆ, ಪವಿತ್ರ ಖುರ್‌ಆನ್‌ನಲ್ಲಿ ಖಂಡಿತವಾಗಿಯೂ ಯಾವುದೇ ನ್ಯೂನತೆ ಇಲ್ಲ. ಅದನ್ನು ಅರ್ಥಮಾಡಿಕೊಳ್ಳುವುದರಲ್ಲಿ ತಪ್ಪು ಸಂಭವಿಸಿದೆ. ವಾತಾವರಣದ ಪ್ರಭಾವವೂ ಆಗಿದೆ. ಅನ್ಯ ಧರ್ಮಗಳೂ ಪ್ರಭಾವ ಬೀರಿವೆ. ಆಚಾರಗಳ ಪ್ರಭಾವ ಉಂಟಾಗಿದೆ. ಅವುಗಳನ್ನು ಧರ್ಮದ ಭಾಗವೆಂದು ತಪ್ಪಾಗಿ ತಿಳಿಯಲಾಗಿದೆ.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್‌ನಲ್ಲಿ ಸೇರಿರುವುದು ಅಲ್ಲಾಹನು ನಮಗೆ ನೀಡಿದ ಭಾಗ್ಯವಾಗಿದೆ. ಸುಜ್ಞಾನರಹಿತ ರಿವಾಯತ್‌ಗಳು ಮತ್ತು ವ್ಯಾಖ್ಯಾನಗಳು ನಮ್ಮ ಮೇಲೆ ಪ್ರಭಾವ ಬೀರಲಾರವು. ಹೀಗಿದ್ದರೂ ನಾವು ಪೂರ್ಣವಾಗಿ ಸುರಕ್ಷಿತರಾಗಿಲ್ಲ. ಏಕೆಂದರೆ ಕೆಲವು ಸ್ವಂತ ಅಭಿಪ್ರಾಯಗಳನ್ನು ಹೊಂದಿದ ಜನರು ಜಮಾಅತಿಗೆ ಸೇರುತ್ತಾರೆ. ಅವರು ಕೆಲವು ಸಂದರ್ಭಗಳಲ್ಲಿ ಕೆಲವು ವಿಷಯಗಳ ಬಗ್ಗೆ ಶಂಕಿಸುತ್ತಾರೆ. ಆದರೂ ಕೂಡಾ ಅಲ್ಲಾಹನ ಅನುಗ್ರಹದಿಂದ ನಾವು ಸಾಮಾನ್ಯವಾಗಿ ತಪ್ಪು ಅಭಿಪ್ರಾಯಗಳಿಂದ ಮುಕ್ತರಾಗಿದ್ದೇವೆ. ಹೀಗಿದ್ದರೂ ನಾವು ತಪ್ಪು ಮಾಡದಿರುವ ಬಗ್ಗೆ ಯಾವಾಗಲೂ ಜಾಗರೂಕರಾಗಿರುವುದು ಆವಶ್ಯಕವಾಗಿದೆ. ಅಹ್ಮದಿಯೇತರರ ನ್ಯೂನತೆಗಳು ನಮ್ಮಲ್ಲಿ ತಲೆದೋರದಂತೆ ಪ್ರಯತ್ನಿಸುತ್ತಿರಬೇಕು. ಅನ್ಯ ಧರ್ಮದವರ ನ್ಯೂನತೆಗಳ ಬಗ್ಗೆ ಸಹ ದೃಷ್ಟಿ ಇರಿಸಬೇಕು. ಇದೇ ರೀತಿ ದೇಶದ ಜನಾಂಗಗಳ ನ್ಯೂನತೆ ಬಗ್ಗೆ ಸಹ ದೃಷ್ಟಿ ಇರಿಸಬೇಕು.

ಮಕ್ಕಳು ತಮ್ಮ ನೆರೆಹೊರೆಯರಿಂದ ಪ್ರಭಾವಿತರಾಗುತ್ತಾರೆ. ತಂದೆ ತಾಯಂದಿರು ಮಕ್ಕಳಿಗೆ ಕಲಿಸಿದರೂ ಸಹ ಅದರಲ್ಲಿ ಕೊರತೆಯುಂಟಾಗುವಾಗ ಮಕ್ಕಳ ಮೇಲೆ ಸುತ್ತು ಮುತ್ತಲಿನ ಪ್ರಭಾವ ಉಂಟಾಗುತ್ತದೆ. ಮಕ್ಕಳು ಹೆಚ್ಚಿನ ಸಮಯವನ್ನು ಶಾಲೆಗಳಲ್ಲಿ ಮತ್ತು ತಮ್ಮ ಗೆಳೆಯರೊಂದಿಗೆ ಆಟವಾಡುತ್ತಾ ವ್ಯವಯಿಸುತ್ತಾರೆ. ಮನೆಗಳಲ್ಲಿ ಅವರಿಗೆ ಟಿ.ವಿ ಮೊದಲಾದವುಗಳ ಮೂಲಕ ಹೊಸ ಗೆಳೆಯರು ಲಭಿಸುತ್ತಾರೆ. ಮಕ್ಕಳನ್ನೂ ದೊಡ್ಡವರನ್ನೂ ಇದು ತನ್ನ ಪ್ರಭಾವಕ್ಕೊಳಪಡಿಸಿದೆ. ಈ ಕಾರಣದಿಂದ ಮಕ್ಕಳು ತಂದೆ ತಾಯಂದಿರ ಮಾತುಗಳನ್ನು ಆಲಿಸಲು ಇಷ್ಟಪಡುವುದಿಲ್ಲ. ಅದಲ್ಲದೆ ತಂದೆ ತಾಯಂದಿರೂ ಮಕ್ಕಳಿಂದ ಸ್ವತಃ ದೂರ ಸರಿದು ಹೋಗುತ್ತಿದ್ದಾರೆ. ಬೇರೆ ಕೆಲವರು ಟಿ.ವಿ ಮತ್ತು ಇತರ ಸಾಧನಗಳ ಮೂಲಕ ಮನೆಯ ವಾತಾವರಣವನ್ನು ಸ್ವತಃ ಕೆಡಿಸುತ್ತಾರೆ. ಇದರ ಪರಿಣಾಮವಾಗಿ ತಂದೆ ತಾಯಂದಿರು ಮಕ್ಕಳ ಮೇಲೆ ದೌರ್ಜನ್ಯ ಮಾಡುತ್ತಾರೆ. ಮಕ್ಕಳು ತಂದೆ ತಾಯಂದಿರಿಗೆ ಗೌರವ ನೀಡುವುದಿಲ್ಲ. ಇದು ವ್ಯಕ್ತಿಗಳಲ್ಲಿ ಮಾತ್ರವಲ್ಲ ಇಡೀ ಸಮುದಾಯದಲ್ಲಿ ಜಾರಿಗೊಳ್ಳುವ ಕೆಡುಕಾಗಿದೆ. ಮನೆಗಳು ನಾಶವಾಗುತ್ತಿವೆ. ತಂದೆ ತಾಯಂದಿರು ಮಕ್ಕಳನ್ನು ಆಧ್ಯಾತ್ಮಿಕವಾಗಿ ಹತ್ಯೆ ಮಾಡುತ್ತಾರೆ. ಕೆಲವು ಸಲ ಶಾರೀರಿಕ ಹತ್ಯೆಗಳು ಸಹ ನಡೆಯುತ್ತಿವೆ. ಪಶ್ಚಿಮದ ಸಮಾಜ ಸ್ವಾತಂತ್ರ್ಯದ ಹೆಸರಿನಲ್ಲಿ ನಾಶದ ಕಡೆಗೆ ಸಾಗುತ್ತಿದೆ. ಅದು ಅವರ ಸಾಮಾಜಿಕ ಕೆಡುಕುಗಳಾಗಿವೆ. ಇದರ ಪ್ರಭಾವಕ್ಕೆ ಕೆಲವು ಅಹ್ಮದಿಯರೂ ಪಾತ್ರರಾಗಿದ್ದಾರೆ. ಆದುದರಿಂದ ಇದು ವಿಶಾಲವಾಗಿ ಹರಡುವ ಮೊದಲು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ನಂತರ ಪುನಃ ನಾವು ಅಜ್ಞಾನಕ್ಕೆ ಮರಳದಿರಲು ನಾವು ನಮ್ಮ ಸಮುದಾಯದ ವತಿಯಿಂದ ಈ ಕೆಡುಕುಗಳಿಂದ ರಕ್ಷಣೆ ಹೊಂದಲು ನಮ್ಮ ಪ್ರಯತ್ನಗಳನ್ನು ತೀವ್ರ ಗೊಳಿಸಬೇಕಾದುದು ಆವಶ್ಯಕವಾಗಿದೆ. ನಮ್ಮ ಜಮಾಅತಿನ ಆಡಳಿತ ವ್ಯವಸ್ಥೆಯ ಎಲ್ಲ ವಿಭಾಗಗಳು ಈ ವಿಷಯದ ಬಗ್ಗೆ ಚಿಂತಿಸಿ ತಕ್ಕುದಾದ ಯೋಜನೆಗಳನ್ನು ರೂಪಿಸಬೇಕು. ಈಗಲೇ ಇದನ್ನು ನಿವಾರಿಸಲು ಪ್ರಯತ್ನ ಮಾಡಬೇಕು. ನಾವು ಲೋಕಕ್ಕೆ ಚಿಕಿತ್ಸೆ ನೀಡುವ ಜವಾಬ್ದಾರಿ ವಹಿಸಿದ್ದೇವೆ. ಚಿಕಿತ್ಸೆ ನೀಡುವವರೇ ರೋಗಿಗಳಾದರೆ ಮತ್ತೆ ಲೋಕದಿಂದ ವೈಯಕ್ತಿಕ ಮತ್ತು ಸಾಮುದಾಯಿಕ ಕೆಡುಕುಗಳನ್ನು ದೂರ ಸರಿಸುವವರು ಯಾರು?

ಇನ್ನೊಂದು ವಿಷಯದ ಬಗ್ಗೆ ಸಹ ಗಮನ ಹರಿಸಬೇಕು. ಒಂದು ಸಮುದಾಯದಲ್ಲಿ ವಿಶಿಷ್ಟ ಕಾರಣಗಳಿಂದ ಕೆಲವು ಒಳಿತುಗಳು ತಲೆದೋರಬಹುದು ಕೆಲವು ಬಲಹೀನತೆಗಳೂ ತಲೆದೋರಬಹುದು. ಇದಕ್ಕೆ ಒಂದು ಉದಾಹರಣೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ: ನಮ್ಮ ಜಮಾಅತ್ ಅಲ್ಲಾಹನ ಅನುಗ್ರಹದಿಂದ

ಎಲ್ಲ ಕಡೆಗಳಲ್ಲೂ ವ್ಯಾಪಿಸಿದೆ. ನಮ್ಮ ಜಮಾಅತಿನ ವಿಶ್ವಾಸವೇನೆಂದರೆ ಅಹ್ಮದಿಯೇತರರ ಹಿಂದೆ ನಿಂತು ನಮಾಝ್ ಮಾಡಬಾರದು ಎಂಬುದು. ಏಕೆಂದರೆ ಅಹ್ಮದಿಯೇತರ ಇಮಾಮ್ ಅಲ್ಲಾಹನು ನೇಮಿಸಿದ ಇಮಾಮರನ್ನು ನಂಬುವುದಿಲ್ಲ. ಅಲ್ಲಾಹನು ಅವರನ್ನು ಈ ಕಾಲದ ಇಮಾಮರನ್ನಾಗಿ ನೇಮಿಸಿ ಕಳುಹಿಸಿದ್ದರೂ ಅವರನ್ನು ಕೊಳಕು ಭಾಷೆ ಬಳಸಿ ಬಯ್ಯುತ್ತಾರೆ. ಅಲ್ಲಾಹನು ನೇಮಿಸಿದ ಇಮಾಮರ ಮೇಲೆ ಮನುಷ್ಯರು ನೇಮಿಸಿದ ಇಮಾಮರಿಗೆ ಸ್ಥಾನ ನೀಡಲು ಸಾಧ್ಯವಿಲ್ಲ. ಆದುದರಿಂದ ನಾವು ಅವರ ಹಿಂದೆ ನಿಂತು ನಮಾಝ್ ಮಾಡುವುದಿಲ್ಲ. ಆದುದರಿಂದ ಅವರು ಮನೆಯಲ್ಲಿ ನಮಾಝ್ ಮಾಡಬೇಕಾಗುತ್ತದೆ. ಕೆಲವರು ತಮ್ಮ ಕಾರ್ಯಭಾರ ನಿಮಿತ್ತ ನಮಾಝ್‌ಗಳನ್ನು ಒಗ್ಗೂಡಿಸುತ್ತಾರೆ. ಅಹ್ಮದಿಯರ ಮಸ್‌ಜಿದ್ ಹತ್ತಿರವಿರುವುದಿಲ್ಲ. ಆದುದರಿಂದ ನಮಾಝ್ ಅನುಷ್ಠಿಸುವವರೂ ಸಾಮೂಹಿಕ ನಮಾಝ್ ಬಗ್ಗೆ ಶ್ರದ್ಧೆ ವಹಿಸುವುದಿಲ್ಲ ಅಥವಾ ನಮಾಝ್‌ಗಳನ್ನು ಅನಾವಶ್ಯಕವಾಗಿ ಒಗ್ಗೂಡಿಸುತ್ತಾರೆ. ಪದೇ ಪದೇ ಉಪದೇಶಿಸುತ್ತಾ ಇದ್ದರೂ ಸಾಮೂಹಿಕ (ಬಾಜಮಾಅತ್) ನಮಾಝ್ ಬಗ್ಗೆ ನಮ್ಮ ಜಮಾಅತಿನ ದೊಡ್ಡ ಸಂಖ್ಯೆಯ ಜನರಿಗೆ ಅದರ ಬಗ್ಗೆ ಉತ್ಸಾಹವಿಲ್ಲ. ಇದೊಂದು ಸಾಮುದಾಹಿಕ ರೋಗವಾಗಿ ಪರಿಣಮಿಸುತ್ತಿದೆ. ಇದರ ಚಿಕಿತ್ಸೆ ನಡೆಸುವುದು ಬಹಳ ಹೆಚ್ಚು ಆವಶ್ಯಕವಾಗಿದೆ. ಇದು ಓರ್ವ ವ್ಯಕ್ತಿ ಮಸ್‌ಜಿದ್‌ಗೆ ಬಂದು ಸಾಮೂಹಿಕ ನಮಾಝ್‌ನಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳುವಂತಹ ವೈಯಕ್ತಿಕ ವಿಷಯವಾಗಿ ಉಳಿದಿಲ್ಲ. ಇದರ ಬಗ್ಗೆ ಸರಿಯಾಗಿ ಗಮನ ಹರಿಸದೆ ಇರುವುದರಿಂದ ಇದೊಂದು ಸಾಮುದಾಯಿಕ ರೋಗವಾಗಿ ಪರಿಣಮಿಸುತ್ತಿದೆ. ಪರಿಸ್ಥಿತಿಗೆ ಅನುಸರಿಸಿ ಕೆಲವು ಸೌಲಭ್ಯಗಳು ನೀಡಿರುವುದರಿಂದ ಸಾಮೂಹಿಕ ನಮಾಝಿನ ಮಹತ್ವ ಕಡಿಮೆಯಾಗಿದೆ. ನಿಸ್ಸಂದೇಹವಾಗಿ ಅಹ್ಮದಿಯರು ಮನೆಗಳಲ್ಲಿ ನಮಾಝ್ ಅನುಷ್ಠಿಸುತ್ತಾರೆ. ಅವರಲ್ಲಿ ಕೆಲವರು ಅಳುತ್ತಾ ನಮಾಝ್ ಮಾಡುವವರೂ ಆಗಿದ್ದಾರೆ. ಅನ್ಯ ಮುಸ್ಲಿಮರಲ್ಲಿ ಬಹುತೇಕ ಜನರು ಇಷ್ಟು ತಾದಾತ್ಮ್ಯದಿಂದ ಪ್ರಾಯಶಃ ನಮಾಝ್ ಅನುಷ್ಠಿಸುವುದಿಲ್ಲ. ಆದರೆ ಅವರು ತೋರಿಕೆಗಾದರೂ ಮಸ್‌ಜಿದ್‌ಗಳಿಗೆ ಹೋಗಿ ನಮಾಝ್ ಅನುಷ್ಠಿಸುತ್ತಾರೆ. ಈ ಅಹ್ಮದಿಯೇತರರಲ್ಲಿ ಮಸ್‌ಜಿದ್‌ಗೆ ಹೋಗಿ ನಮಾಝ್ ಮಾಡುವ ಬಗ್ಗೆ ಆಸಕ್ತಿ ವರ್ಧಿಸುತ್ತಾ ಇದೆ. ಅವರು ನಮಾಝ್ ಶ್ರದ್ಧೆ ನೀಡಿ ಅನುಷ್ಠಿಸುತ್ತಾರೋ ಇಲ್ಲವೋ ಎಂದು ತಿಳಿಯದು. ಆದರೆ ಅವರು ಮಸ್‌ಜಿದ್‌ಗಳಿಗೆ ಹೋಗಿ ನಮಾಝ್ ಅನುಷ್ಠಿಸುತ್ತಾ ಇದ್ದಾರೆ. ಆ ಬಗ್ಗೆ ಅವರ ಆಸಕ್ತಿ ವರ್ಧಿಸುತ್ತಾ ಇದೆ. ಆದರೆ ನಾವು ಅದರ ಕಡೆಗೆ ಬಹಳ ಕಡಿಮೆ ಶ್ರದ್ಧೆ ನೀಡುತ್ತಿದ್ದೇವೆ. ನಾವು ಇದರ ಬಗ್ಗೆ ಗಮನ ಹರಿಸಬೇಕಾದುದು ಅತ್ಯಂತ ಅವಶ್ಯವಾಗಿದೆ. ಮಸ್‌ಜಿದ್‌ಗಳನ್ನು ನೈಜ ಸತ್ಯವಿಶ್ವಾಸಿಗಳು ತುಂಬಬೇಕು. ಈ ಕಾಲದ ಇಮಾಮರನ್ನು ನಂಬಿದವರೇ ನೈಜ ವಿಶ್ವಾಸಿಗಳಾಗಿದ್ದಾರೆ. ಆರಾಧನೆ ಹೆಸರಿನಲ್ಲಿ ಗಲಭೆ ದೊಂಬಿಗಳನ್ನು ಮಾಡುವವರು ನೈಜ ವಿಶ್ವಾಸಿಗಳಲ್ಲ.

ಮಸ್‌ಜಿದ್‌ಗಳಿಗೆ ಹೋಗಿ ನಮಾಝ್ ಮಾಡದೆ ಇರುವುದರ ನ್ಯೂನತೆ ಮತ್ತು ನಮಾಝ್‌ಗಳನ್ನು ಒಗ್ಗೂಡಿಸು(ಜಮಅ್)ವುದರ ನ್ಯೂನತೆ ಇನ್ನಷ್ಟು ವರ್ಧಿಸುವ ಅಪಾಯ ಮಕ್ಕಳಲ್ಲಿ ಅದರ ಬಗ್ಗೆ ಮಹತ್ವದ ಭಾವನೆ ಕಡಿಮೆಯಾಗುವಾಗ ಸಂಭವಿಸುತ್ತದೆ. ಕೆಲವು ಮಕ್ಕಳು ತಮ್ಮ ತಂದೆ ತಾಯಂದಿರನ್ನು ನೋಡಿ ದೈನಂದಿನ ನಮಾಝ್ ಮೂರು ಎಂದು ಹೇಳುತ್ತಾರೆ. ನಮಾಝ್‌ಗಳು ಐದು ಹೊತ್ತು ಎಂದು ಹೇಳಿದಾಗ ಅವರು ಹೇಳುತ್ತಾರೆ– ನಮ್ಮ ತಂದೆ ತಾಯಂದಿರು ಮೂರು ನಮಾಝ್‌ಗಳನ್ನು ಅನುಷ್ಠಿಸುವುದು ನಾವು ಕಂಡೆವು ಎಂದು. ಆದುದರಿಂದ ಎಲ್ಲ ಸ್ಥಳಗಳಲ್ಲೂ ಇದರ ಬಗ್ಗೆ ಚಿಂತಿಸಿ ಯೋಜನೆಗಳನ್ನು ರೂಪಿಸಬೇಕು. ಇಲ್ಲವಾದರೆ, ಮುಂದಿನ ಪೀಳಿಗೆಯಲ್ಲಿ ಇದು ನಮ್ಮ ಸಾಮಾಜಿಕ ಕೆಡುಕು ಆಗಿ ತಲೆಯೆತ್ತುವುದು. ಇಂದಿನ ಕಾಲದಲ್ಲಿ ಲೋಕವು ಅಲ್ಲಾಹನಿಂದ ದೂರ ಸರಿದು ಹೋಗುತ್ತಿದೆ. ನಾವು ತೀವ್ರವಾಗಿ ಪ್ರಯತ್ನ ಮಾಡದಿದ್ದರೆ ವಿವಿಧ ರೀತಿಯ ಕೆಡುಕುಗಳು ನಮ್ಮೊಳಗೆ ಪ್ರವೇಶಿಸುತ್ತಾ ಹೋಗುವುವು. ಒಂದು ಕೆಡುಕಿನ ನಂತರ ಇನ್ನೊಂದು ಬರುವುದು. ಧರ್ಮವೆಂಬುದು ಹೆಸರಿಗೆ ಮಾತ್ರ ಬಾಕಿಯಾಗಿ ಉಳಿಯುವುದು. ಧರ್ಮದ ಆತ್ಮ ಜೀವಂತವಾಗಿರಲಾರದು. ಯಾವುದಾದರೂ ಪ್ರದೇಶದಲ್ಲಿ ಯಾವುದಾದರೂ ರೋಗದ ಹಾವಳಿ ಬಾಧಿಸಿದರೆ ನಾವು ಕೂಡಲೆ ಚಿಂತಾಮಗ್ನರಾಗುತ್ತೇವೆ. ಆ ರೋಗ ಹೆಚ್ಚು ಪಸರಿಸದ ಹಾಗೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುತ್ತೇವೆ. ಹಾಗಿರುವಾಗ ಆಧ್ಯಾತ್ಮಿಕ ರೋಗಗಳನ್ನು ದೂರ ಸರಿಸಲು ನಾವು ಎಷ್ಟು ಹೆಚ್ಚು ಪ್ರಯತ್ನ ಮಾಡಬೇಕು ಎಂದು ಯೋಚಿಸಿರಿ. ನಮ್ಮನ್ನು ಆಧ್ಯಾತ್ಮಿಕ ರೋಗಗಳಿಂದ ರಕ್ಷಿಸಲು ಪ್ರತಿಯೊಂದು ನಿಟ್ಟಿನಲ್ಲೂ ಸಾಮುದಾಯಿಕವಾಗಿ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುವುದು ಅತ್ಯಂತ ಆವಶ್ಯಕವಾಗಿದೆ.

ಮತ ಪಂಡಿತರು ಸೃಷ್ಟಿಸಿದ ತಪ್ಪು ನಂಬಿಕೆಗಳ ಮತ್ತು ಕರ್ಮಗಳ ಕಾರಣ ಮುಸ್ಲಿಮರಲ್ಲಿ ಬಹಳ ದೊಡ್ಡ ಭಾಗ, ಅವರಿಗೆ ಪರಿಪೂರ್ಣವಾದ ಉಪದೇಶಗಳನ್ನು ಪವಿತ್ರ ಖುರ್‌ಆನ್ ನೀಡಿದ್ದರೂ ದಾರಿ ತಪ್ಪಿ ಹೋದರು. ನಾವು ನಮ್ಮ ಸುಧಾರಣೆ ಮಾಡಿದ ನಂತರ ದಾರಿ ತಪ್ಪಿ ಹೋಗದಿರಲು ಬಹಳ ಹೆಚ್ಚು ಪ್ರಯತ್ನ ಮಾಡಬೇಕಾದುದು ಆವಶ್ಯಕವಾಗಿದೆ. ಇತರ ಮುಸ್ಲಿಮರಲ್ಲಿ ಹೇಗೆ ನ್ಯೂನತೆಗಳು ತಲೆದೋರಿದುವು ಮತ್ತು ಅವರು ಹೇಗೆ ದಾರಿ ತಪ್ಪಿದರು, ನಾವು ಆ ರೀತಿ ಆಗದಂತೆ ಹೇಗೆ ನಮ್ಮನ್ನು ರಕ್ಷಿಸಬಹುದು ಎಂಬುದರ ಬಗ್ಗೆ ನಾವು ಚಿಂತಿಸುತ್ತಾ ಇರಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ನಂತರ ಅವರ ಉಪದೇಶಗಳನ್ನು ಅರಿತುಕೊಳ್ಳುವುದು ಮತ್ತು ಅನುಷ್ಠಾನಕ್ಕೆ ತರುವುದು ಆವಶ್ಯಕವಾಗಿದೆ. ಪರಿಸ್ಥಿತಿಗೆ ಅನುಸಾರವಾಗಿ ನಮ್ಮನ್ನು ನಾವು ಕಾಲದ ಪ್ರವಾಹದ ಧಾರೆಯಲ್ಲಿ ಹರಿಯಲು ಬಿಡಬಾರದು. ನಾವು ಪರಿಸ್ಥಿತಿಯನ್ನು ನಮಗೆ ದೊರೆತ ಉಪದೇಶಗಳ ಒಳಗೆ ಹಾಕಿಕೊಂಡು ನಮ್ಮ ಜೊತೆಯಲ್ಲಿ ಅವುಗಳನ್ನು ಕೊಂಡೊಯ್ಯಬೇಕು.

ಖಿಲಾಫತ್‌ನೊಂದಿಗೆ ಸಂಬಂಧ ಬಲಿಷ್ಠಗೊಳಿಸುವ ಆವಶ್ಯಕತೆ ಇದೆ. ಈ ಕಾಲದಲ್ಲಿ ಎಂ.ಟಿ.ಎ ಮತ್ತು ನಮ್ಮ ವೆಬ್‌ಸೈಟ್‌ಗಳನ್ನು ನಮಗೆ ಅಲ್ಲಾಹನು ದಯಪಾಲಿಸಿರುವನು. ಇವುಗಳ ಮೂಲಕ ವಾಸ್ತವಿಕ ಇಸ್ಲಾಮೀ ತತ್ವಗಳು ನಮಗೆ ದೊರಕುತ್ತವೆ. ನಾವು ಇವುಗಳೊಂದಿಗೆ ಸಂಬಂಧ ಸ್ಥಾಪಿಸಬೇಕು. ನಾವು ಒಂದು ವಿಷಯ ನೆನಪಿಡಬೇಕು.

ಮುಸ್ಲಿಮರಿಗೆ ಪವಿತ್ರ ಖುರ್‌ಆನ್‌ನಂತಹ ಮಹಾನ್ ಗ್ರಂಥ ಲಭಿಸಿದರೂ ಅವರಲ್ಲಿ ಎಂತಹ ತಪ್ಪುಗಳು ಉಂಟಾದುವು ಎಂದರೆ ಅವುಗಳ ಕಾರಣದಿಂದ ಅವರೊಳಗೆ ವಿಶಿಷ್ಟ ರೋಗಗಳು ತಲೆಯೆತ್ತಿದವು. ಅದು ಅನಿವಾರ್ಯವಾಗಿತ್ತು. ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅವರಿಗೆ ಅನೇಕ ಮಾರ್ಗದರ್ಶಕ ಸಿದ್ಧಾಂತಗಳನ್ನು ವಿವರಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪವಿತ್ರ ಖುರ್‌ಆನಿಗೆ ನೀಡಿದ ವ್ಯಾಖ್ಯಾನಗಳನ್ನು ನಾವು ಶ್ರದ್ಧೆವಹಿಸಿ ಅಧ್ಯಯನ ಮಾಡಬೇಕು. ಪವಿತ್ರ ಖುರ್‌ಆನ್‌ನಿಂದ ಹೊಸ ಹೊಸ ಅಂಶಗಳನ್ನು ಕಂಡುಕೊಳ್ಳಬೇಕು. ನಾವು ಇತರ ಮುಸ್ಲಿಮರ ಹಾಗೆ ಹಳೆಯ ವ್ಯಾಖ್ಯಾನಗಳನ್ನು ಮಾತ್ರ ಅವಲಂಭಿಸಿದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಾರ್ಗದರ್ಶನ ನೀಡಿದ ಜ್ಞಾನ ಸಹ ನಮಗೆ ಲಭಿಸಲಾರದು.

ಪವಿತ್ರ ಖುರ್‌ಆನ್ ಪರಿಪೂರ್ಣಗ್ರಂಥವಾಗಿದೆ. ಅದರಲ್ಲಿ ಎಲ್ಲವೂ ಇದೆ ಎನ್ನುವುದರಲ್ಲಿ ಸಂಶಯವಿಲ್ಲ. ಅದನ್ನು ಓದಿ ಚಿಂತಿಸಿ ಅದರ ಉಪದೇಶಗಳ ಪ್ರಕಾರ ಕರ್ಮ ಮಾಡುವವರಿಗೆ ಮಾತ್ರ ಅದರಿಂದ ಮಾರ್ಗದರ್ಶನ ಲಭಿಸುತ್ತದೆ. ಒಂದು ವಿಷಯ ತೆಗೆದುಕೊಂಡು ನಮಗೆ ಮಾರ್ಗದರ್ಶನ ಲಭಿಸಿತು ಎಂದು ಹೇಳುವುದು ಸಾಕಾಗಲಾರದು. ಪ್ರತಿಯೊಂದು ಉಪದೇಶವನ್ನು ಅನುಷ್ಠಾನಕ್ಕೆ ತರುವುದು ಆವಶ್ಯಕವಾಗಿದೆ. ಅದರ ಮೂಲಕ ವೈಯಕ್ತಿಕ ಮತ್ತು ಸಾಮೂಹಿಕ ಕೆಡುಕುಗಳ ಬಗ್ಗೆ ತಿಳಿಯುತ್ತದೆ. ಅಂತಿಮ ಕಾಲಘಟ್ಟದ ಜನರಿಗೆ ಉಪದೇಶಿಸಲು ಅವರ ಯೋಚನೆಗಳನ್ನು ವಿಶಾಲಗೊಳಿಸಲು ಅವರಿಗೆ ಬೆಳಕು ನೀಡಲು ಮತ್ತು ಪವಿತ್ರ ಖುರ್‌ಆನನ್ನು ವಿವರಿಸಿಕೊಡಲು ಒಬ್ಬ ಮಹಾತ್ಮರನ್ನು ಅಲ್ಲಾಹನು ಕಳುಹಿಸುವುದಾಗಿ ಪವಿತ್ರ ಖುರ್‌ಆನ್ ಘೋಷಿಸಿದೆ. ಆದರೆ ಚಿಂತಿಸದಿರುವ ಮತ್ತು ಪಂಡಿತರೆಂದು ಹೇಳಿಕೊಳ್ಳುವ ಅಜ್ಞಾನಿಗಳು ಅಲ್ಲಾಹನು ಕಳುಹಿಸಿದವರನ್ನು ತಿರಸ್ಕರಿಸಿದರು. ಈ ಜನರು ಪವಿತ್ರ ಖುರ್‌ಆನಿನ ಜ್ಞಾನದ ವೈಶಾಲ್ಯತೆಯಿಂದ ವಂಚಿತರಾಗಿದ್ದಾರೆ. ಈ ಕಾರಣದಿಂದ ಅಜ್ಞಾನದಲ್ಲಿ ಮುಳುಗಿದ್ದಾರೆ. ಇಸ್ಲಾಮನ್ನು ತಪ್ಪಾಗಿ ವ್ಯಾಖ್ಯಾನಿಸಿ ಇಸ್ಲಾಮಿನ ಒಳಿತುಗಳನ್ನು ವಿವರಿಸುವುದಕ್ಕೆ ಬದಲಾಗಿ ಅದನ್ನು ಅಪಕೀರ್ತಿಗೆ ಗುರಿಪಡಿಸುತ್ತಾ ಇದ್ದಾರೆ. ಮುಸ್ಲಿಮರ ಈ ಅವಸ್ಥೆಯಿಂದ ನಾವು ಪಾಠಕಲಿಯಬೇಕಾಗಿದೆ. ನಾವು ಅದರ ಬಗ್ಗೆ ಚಿಂತನೆ ನಡೆಸಬೇಕಾಗಿದೆ. ನಾವು ಕೇವಲ ಬಾಹ್ಯವಾದುದು ಸಾಕೆಂದು ಯೋಚಿಸಬಾರದು. ಇಸ್ಲಾಮಿನ ಉಪದೇಶಗಳ ಆತ್ಮವನ್ನು ಹುಡುಕಬೇಕು. ಪ್ರತಿಯೊಂದು ಕೆಡುಕು ಅದು ಸಾಮೂಹಿಕ ಕೆಡುಕಾಗಿ ಪರಿವರ್ತನೆ ಹೊಂದುವ ಮೊದಲು ಅದನ್ನು ದೂರ ಸರಿಸಬೇಕು. ಪ್ರತಿಯೊಂದು ಒಳಿತನ್ನು ಸಾಮುದಾಯಿಕ ಒಳಿತಾಗಿ ಪರಿವರ್ತಿಸಿ ಜಮಾಅತಿನಲ್ಲಿ ಜಾರಿಗೊಳಿಸಬೇಕು. ಯಾವಾಗಲೂ ನಮ್ಮ ವಾತಾವರಣವನ್ನು ಸರಿಯಾಗಿರಿಸಿಕೊಳ್ಳಬೇಕು. ಅದನ್ನು ನಾವು ನಮ್ಮ ಸಂತಾನಗಳಿಗೂ ಸಾಗಿಸುವವರಾಗಬೇಕು. ಕೆಡುಕುಗಳು ಹರಡದಿರಲಿ. ಒಳಿತು ಮತ್ತು ಸತ್ಕರ್ಮಗಳು ಹರಡುವಂತಾಗಲಿ. ಅಲ್ಲಾಹನು ನಮಗೆ ಅದರ ಭಾಗ್ಯ ನೀಡಿ ಅನುಗ್ರಹಿಸಲಿ – ಆಮೀನ್.

ಜುಮುಅ ನಮಾಝ್‌ನ ನಂತರ ಎರಡು ಹಾಝಿರ್ ಜನಾಝ ಮತ್ತು ಎರಡು ಗಾಯಿಬ್ ಜನಾಝ ನಮಾಝ್‌ಗಳನ್ನು ಹುಝೂರ್ ಅನುಷ್ಠಿಸಿದರು.

ಹಾಝಿರ್ ಜನಾಝಗಳು:

1. ರಝಿಯ ಮುಸರ್ರತ್ ಖಾನ್ ಸಾಹಿಬ. ಲತೀಫ್ ಖಾನ್ ಸಾಹೇಬರ ಪತ್ನಿ. 79ನೇ ವಯಸ್ಸಿನಲ್ಲಿ 11–2–2015ರಂದು ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُونَ

2. ಆಮಿರ್ ಶೀರಾಝ್ ಸಾಹೇಬ್. ಶಾಹಿದ್ ಮಹ್ಮೂದ್ ಸಾಹೇಬರ ಪುತ್ರ. 12–2–2015ರಂದು 29ನೇ ವಯಸ್ಸಿನಲ್ಲಿ ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُونَ

ಗಾಯಿಬ್ ಜನಾಝಗಳು:

1. ಅಲ್‌ಹಾಜ್ ರಶೀದ್ ಅಹ್ಮದ್ ಸಾಹೇಬ್. ಅಮೇರಿಕದ ಮಿಲ್‌ವಾಕಿಯಲ್ಲಿ 7–2–2015ರಂದು ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُونَ

2. ಹಸನ್ ಅಬ್ದುಲ್ಲಾ ಸಾಹೇಬ್. ಅಮೇರಿಕದ ಡಿಟ್ರಾಯಿಟ್ ನಿವಾಸಿ. 30–1–2015ರಂದು ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُونَ

ಮೃತರಿಗೆ ಅಲ್ಲಾಹನು ಮಗ್‌ಫಿರತ್, ಮರ್‌ಹಮತ್ ಮತ್ತು ಉನ್ನತ ಪದವಿ ದಯಪಾಲಿಸಲಿ – ಆಮೀನ್.

--------------*****--------------


*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 13-02-2015.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

**Email**: *khutuba.kannada@gmail.com*